# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 653
ಸದಸ್ಯರ ಹೆಸರು : ಶ್ರೀ ಗೋವಿಂದರಾಜು
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 23.12.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ಸಿಗಾಗಿ ಬರುವಂಥ ಜನರನ್ನು ರಾತ್ರಿ 8 ಗಂಟೆ ನಂತರ ಖಾಸಗಿ ಬಸ್ಸುಗಳ ದಲ್ಲಾಳಿಗಳು ಪ್ರಯಾಣಿಕರನ್ನು ಅಡ್ಡಗಟ್ಟಿ ತಮ್ಮ ವಾಹನಗಳಲ್ಲಿ ಕರೆದೊಯ್ಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸರ್ಕಾರದ ಗಮನಕ್ಕೆ ಬಂದಿದೆ |
| ಆ. | ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಎಷ್ಟು ಬಸ್ಸುಗಳನ್ನು ಸೀಜ್ ಮಾಡಲಾಗಿದೆ: ಇದಕ್ಕೆ ಸರ್ಕಾರದ ಅನುಮತಿ ಇದೆಯೇ; | ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಕರ್ತವ್ಯದ ಮೇಲಿನ ಸಂಚಾರ / ಭದ್ರತಾ ಸಿಬ್ಬಂದಿಗಳು ಬಸ್ ನಿಲ್ದಾಣ ಪ್ರವೇಶಿಸಿ ಪ್ರಯಾಣಿಕರನ್ನು ಕರೆದೊಯ್ಯುವ ಖಾಸಗಿ ಬಸ್ಸುಗಳ ಏಜೆಂಟ್‌ರುಗಳ ಬಗ್ಗೆ ನಿಗಾವಹಿಸಿ, ಬಂದಂತಹ ಸಂದರ್ಭದಲ್ಲಿ ಅವರುಗಳನ್ನು ಹಿಡಿದು ಮುಂದಿನ ಕ್ರಮಕ್ಕಾಗಿ ಉಪ್ಪಾರಪೇಟೆ ಪೊಲೀಸ್ ಹೊರಠಾಣೆಗೆ ಒಪ್ಪಿಸಲಾಗಿರುತ್ತದೆ, ಜನವರಿ-2022 ರಿಂದ ನವೆಂಬರ್-2022 ರವರೆಗೆ ಒಟ್ಟು 433 ಖಾಸಗಿ ಏಜೆಂಟರುಗಳನ್ನು ಹಿಡಿದು ಪೊಲೀಸ್ ಹೊರಠಾಣೆಗೆ ಒಪ್ಪಿಸಲಾಗಿರುತ್ತದೆ. |
| ಇ. | ಇದರಿಂದ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗೆ ನಷ್ಟವುಂಟಾಗುವುದಿಲ್ಲವೇ: ಬಸ್ಸು ಸ್ಟ್ಯಾಂಡ್ ಸುತ್ತಲು ಬೆಳಗ್ಗೆಯಿಂದ ರಾತ್ರಿಯವರೆಗೂ ಬಸ್ಸುಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಕೆ.ಎಸ್.ಆರ್.ಟಿ.ಸಿ. ಬಿ.ಎಂ.ಟಿ.ಸಿ. ಮತ್ತು ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸರ್ಕಾರದ ಗಮನಕ್ಕೆ ಬಂದಿದೆ |
| ಈ. | ಬಂದಿದ್ದಲ್ಲಿ, ಸಾರಿಗೆ ಇಲಾಖೆಯಿಂದ | ಕ.ರಾ.ರ.ಸಾ.ನಿಗಮ |


ated from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM

| | |
|---|---|
| ಪೊಲೀಸ್ ಇಲಾಖೆಗೆ ದೂರುಗಳನ್ನು ನೀಡಲಾಗಿದೆಯೇ: ದೂರುಗಳಿದ್ದಲ್ಲಿ ಅದರ ಪ್ರತಿಗಳನ್ನು ಒದಗಿಸುವುದು? | ಈ ಬಗ್ಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ ರವರು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ, ಹೆಚ್ಚುವರಿ ಪೊಲೀಸ್ ಆಯುಕ್ತರು(ಸಂಚಾರ), ಬೆಂಗಳೂರು ಮಹಾನಗರ, ಉಪ ಪೊಲೀಸ್ ಆಯುಕ್ತರು (ಸಂಚಾರ) ಪಶ್ಚಿಮ ವಿಭಾಗ, ಸಹಾಯಕ ಪೊಲೀಸ್ ಆಯುಕ್ತರು(ಸಂಚಾರ) ಪಶ್ಚಿಮ ಉಪ ವಿಭಾಗ, ವೃತ್ತ ನಿರೀಕ್ಷಕರು(ಸಂಚಾರ), ಉಪ್ಪಾರಪೇಟೆ ಪೊಲೀಸ್ ಠಾಣೆ ರವರುಗಳಿಗೆ ದಿ:13-06-2022ರಂದು ಪತ್ರ ಬರೆಯಲಾಗಿರುತ್ತದೆ.<br><br>ಬೆಂ.ಮ.ಸಾ.ಸಂಸ್ಥೆ<br><br>ಬೆಂ.ಮ.ಸಾ.ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣದ ಬಳಿ ಸಾರಥಿ ಗಸ್ತು ಪಡೆಯ ಸಂಚಾರ ಸಿಬ್ಬಂದಿಯನ್ನು ನಿಯೋಜಿಸಿದ್ದು, ಕೆಂ.ಬ.ನಿಲ್ದಾಣದ ಸುತ್ತಲು ಖಾಸಗಿ ಬಸ್ಸುಗಳು/ವಾಹನಗಳನ್ನು ನಿಲ್ಲಿಸುವುದನ್ನು ತೆರವುಗೊಳಿಸಿ, ಸಂಸ್ಥೆಯ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ |

ಸಂಖ್ಯೆ: ಟಿಡಿ 292 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



nerated from eOffice by B SREERAMULU, TD-MIN(BS), TRANSPORT MINISTER, Trans on 21/12/2022 04:59 PM